<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 3599-2012

ಸಿಡಬ್ಲೂ - 121 ಪಿಡಬ್ಲೂ-22

| | |
|---|---|
| ಸಾಕ್ಷಿದಾರರ ಹೆಸರು | : ಸಂಗಮೇಶ್ವರ ಹೆಚ್ |
| ತಂದೆಯ ಹೆಸರು | : ಹೆಚ್. ವಿಶ್ವನಾಥಯ್ಯ |
| ವಯಸ್ಸು | : 55 ವರ್ಷ |
| ಕೆಲಸ | : ಖಾಸಗಿ ನೌಕರಿ |
| ವಾಸ | : ವಿದ್ಯಾರಣ್ಯಪುರ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 04-06-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

2008 ರಲ್ಲಿ ಸೈಟು ಕೊಳ್ಳಲು ಪ್ರಯತ್ನಿಸಿದ್ದು, ಆಗ ಐಶ್ವರ್ಯ ಪ್ರೊಜೆಕ್ಟ ರವರು ಬಿಡದಿಯ ವೆಲ್ಲಿಂಗ್ ಟನ್ ಪ್ರೊಜೆಕ್ಟ ಎಂಬ ಹೆಸರಿನಲ್ಲಿ ಸೈಟು ಮಾಡುತ್ತಿದ್ದರು, ಅದರಲ್ಲಿ ನಾನು 30*40 ಒಂದು ನಿವೇಶನವನ್ನು ಕೊಂಡುಕೊಳ್ಳಲು ಒಪ್ಪಿಕೊಂಡಿರುತ್ತೇನೆ. ಆ ನಿವೇಶನದ ಬೆಲೆ ರೂ.12 ಲಕ್ಷ ಆಗಿತ್ತು. ಆ ಪೈಕಿ ನಾನು ಮುಂಗಡವಾಗಿ ರೂ.3 ವರೆ ಲಕ್ಷ ಹಣವನ್ನು ಚೆಕ್ಕುಗಳ ಮೂಲಕ ನೀಡಿರುತ್ತೇನೆ. ಚೆಕ್ಕನ್ನು ವೆಲ್ಲಿಂಗ್ ಟನ್ ಪ್ರೊಜೆಕ್ಟ ಹೆಸರಿನಲ್ಲಿ ಕೊಟ್ಟಿರುತ್ತೇನೆ. ಆ ಪ್ರಾಜೆಕ್ಟಗೆ 1 ನೇ ಆರೋಪಿ ಮಾಲೀಕರಾಗಿದ್ದರು. ಆ ದಿವಸ ಭಾಸ್ಕರ ರೆಡ್ಡಿ ಮತ್ತು ಟಿ. ಆರ್. ರೆಡ್ಡಿ ಕಚೇರಿಯಲ್ಲಿ ಇದ್ದರು. ಈ ದಿವಸ ನ್ಯಾಯಾಲಯದಲ್ಲಿರುವ 2 ನೇ ಆರೋಪಿ ಆ ದಿನ ಕಚೇರಿಯಲ್ಲಿ ಇದ್ದರು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಮತ್ತು ಆರೋಪಿಗಳ ನಡುವೆ ವ್ಯವಹಾರ ಆದ ಬಗ್ಗೆ ಕ್ರಯದ ಕರಾರು ಪತ್ರ ಆಗಿತ್ತು.

(ಈ ಹಂತದಲ್ಲಿ ಮೂಲ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಲುವಾಗಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ